**ದಿನಾಂಕಃ 26.06.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ. ಆರ್ ಎಂ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ವಿಚಾರಗಳನ್ನು ನಾನೇ ನನ್ನ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ ಎಂದು ತಿಳಿದು ಸಹಿ ಮಾಡಿರುತ್ತೇನೆ.

ದಿನಾಂಕ 08.09.1998 ರ ಕ್ರಯ ಪತ್ರದ ಮೂಲ ಪ್ರತಿಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ-1 ಎಂದು, ದಿನಾಂಕ 13.11.1998 ರ ಕ್ರಯ ಪತ್ರದ ಮೂಲ ಪ್ರತಿಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ-2 ಎಂದು, ಬಿ ಎಲ್ ಆನಂದ್ ರವರ ಮರಣ ಪ್ರಮಾಣ ಪತ್ರದ ಧೃಡೀಕೃತ ನಕಲನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ-3 ಎಂದು, ವಂಶವೃಕ್ಷದ ಧೃಡೀಕರಣ ಪತ್ರದ ಗಣಕೀಕೃತ ನಕಲನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ-4 ಎಂದು, ಪೌತಿ ಬದಲಾವಣೆ ವಹಿಯ ಧೃಡೀಕೃತ ನಕಲನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ-5 ಎಂದು, ದಿನಾಂಕ 05.02.2020 ರ ತಿಳುವಳಿಕೆ ಪತ್ರದ ನಕಲನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ-6 ಎಂದು, ಬನ್ನೂರು ಗ್ರಾಮಾಂತರದ ಸರ್ವೆ ನಂ.1485 ರ 2000-01 ರಿಂದ 2009-10 ರವರೆಗಿನ 10 ಪಹಣಿ ಪತ್ರಿಕೆಗಳ ಗಣಕೀಕೃತ ನಕಲುಗಳನ್ನು ಹಾಜರುಪಡಿಸುತ್ತಿದ್ದು ಅವುಗಳನ್ನು ನಿಪಿ-7 ರಿಂದ ನಿಪಿ-16 ಎಂದು, ಬನ್ನೂರು ಗ್ರಾಮಾಂತರದ ಸರ್ವೆ ನಂ.1485 ರ 2016-17 ರಿಂದ 2019-20 ರವರೆಗಿನ 4 ಪಹಣಿ ಪತ್ರಿಕೆಗಳ ಗಣಕೀಕೃತ ನಕಲುಗಳನ್ನು ಹಾಜರುಪಡಿಸುತ್ತಿದ್ದು ಅವುಗಳನ್ನು ನಿಪಿ-17 ರಿಂದ ನಿಪಿ-20 ಎಂದು, ಒಂದು ಭಾವಚಿತ್ರವನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ-21 ಎಂದು, ಒಂದು ಸಿಡಿಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ-22 ಎಂದು, ಬನ್ನೂರು ಗ್ರಾಮಾಂತರದ ಸರ್ವೆ ನಂ.1485 ರ 1999-2000 ರ ಸಾಲಿನ ಪಹಣಿ ಪತ್ರಿಕೆಯ ಧೃಡೀಕೃತ ನಕಲನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ-23 ಎಂದು, ಎಂ ಆರ್ ನಂ.86/98-99 ರ ಧೃಡೀಕೃತ ನಕಲನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ-24 ಎಂದು, ಎಂ ಆರ್ ನಂ.138/98-99 ರ ಧೃಡೀಕೃತ ನಕಲನ್ನು

ಹಾಜರುಪಡಿಸುತ್ತಿದ್ದು ಅದನ್ನು ನಿಪಿ-25 ಎಂದು, ಬನ್ನೂರು ಗ್ರಾಮಾಂತರದ ಸರ್ವೆ ನಂ.1485/1ರ 2020-21 ರಿಂದ 2023-24ರವರೆಗಿನ 4 ಪಹಣಿ ಪತ್ರಿಕೆಗಳ ಗಣಕೀಕೃತ ನಕಲುಗಳನ್ನು ಹಾಜರುಪಡಿಸುತ್ತಿದ್ದು ಅವುಗಳನ್ನು ನಿಪಿ-26 ರಿಂದ ನಿಪಿ-29 ಎಂದು, ಬನ್ನೂರು ಗ್ರಾಮಾಂತರದ ಸರ್ವೆ ನಂ.1485/2ರ 2020-21 ರಿಂದ 2023-24ರವರೆಗಿನ 4 ಪಹಣಿ ಪತ್ರಿಕೆಗಳ ಗಣಕೀಕೃತ ನಕಲುಗಳನ್ನು ಹಾಜರುಪಡಿಸುತ್ತಿದ್ದು ಅವುಗಳನ್ನು ನಿಪಿ-30 ರಿಂದ ನಿಪಿ-33 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ